ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.1120/2019**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಸಂಜಯ್ ಕಭಿರಾಜ್** | | |
| **ತಂದೆಃಹೆಸರು** | **ರಂಜಿತ್ ಕಭಿರಾಜ್** | **ಪಿಡಬ್ಲೂಃ** | **4** |
| **ವಯಸ್ಸು** | **38 ವರ್ಷ** | **ಸಿಡಬ್ಲೂಃ** | **3** |
| **ಉದ್ಯೋಗಃ** | **ವ್ಯವಸಾಯ** | | |
| **ವಾಸ ಸ್ಥಳಃ** | **ಆರ್ ಹೆಚ್ ನಂ.2** | | |

**ದಿನಾಂಕ 07-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಚಾಸಾ-1 & 2 ರವರ ಪರಿಚಯ ಇದೆ.

ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು.

ನಾನು ಚಾಸಾ-1 & 4 ರವರ ನಡುವೆ ಆದ ಜಗಳದ ಸಲುವಾಗಿ 2018 ರಲ್ಲಿ ಬೆ.7 ರಿಂದ 8 ಗಂಟೆಯ ಸಮಯದಲ್ಲಿ ನಾನು ಸಹಿ ಮಾಡಿದ್ದೆ. ಸ್ಥಳ ಯಾವುದು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ದಿಃ 19-08-2018 ರಂದು ಬೆ.9 ರಿಂದ 10 ಗಂಟಯೆವರೆಗೆ ಪಂಚನಾಮೆ ಮಾಡಿದ್ದರು ಎಂದರೆ ಸರಿ. ಸ್ಥಳವನ್ನ ಚಾಸಾ-1 ರವರು ತೋರಿಸಿದ್ದರು ಎಂದರೆ ಸರಿ. ನಿಪಿ-3 ರಲ್ಲಿರುವ ಸಂಗತಿಗಳನ್ನು ನನಗೆ ಓದಿ ಹೇಳಿ ಸಹಿ ಪಡೆದಿದ್ದರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

1. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾನು ಆ ದಿನ ಒಂದೇ ಸಹಿ ಮಾಡಿದ್ದೆ. ನಾನು ಪ್ರಿಂಟೆಡ್ ಫಾರಂನಲ್ಲಿ ಸಹಿ ಮಾಡಿದ್ದೆ. ನಮ್ಮ ಮನೆಯ ನಂಬರ್ 210. ಚಾಸಾ-1 ರವರ ಮನೆಯ ನಂಬರ್ ನನಗೆ ಗೊತ್ತಿಲ್ಲ. ಚಾಸಾ-1 ರವರ ಮನೆ ಬರುವುದು 3-4 ವಾರ್ಡ್ ಎಂದು ನುಡಿದು ನಂತರದಲ್ಲಿ 5 ನೇ ವಾರ್ಡ್ ಎನ್ನುತ್ತಾರೆ.

2. ನಾನು ಸಹಿ ಮಾಡಿದ ಹಾಳೆಯಲ್ಲಿ ನಕ್ಷೆ & ಚೆಕ್ ಬಂದಿ ಬರೆದಿರಲಿಲ್ಲ. ನನಗೆ ಪಂಚರನ್ನಾಗಿ ಬರುವಂತೆ ನೋಟೀಸು ಕೊಟ್ಟಿರಲಿಲ್ಲ. ನಾನು ಸಹಿ ಮಾಡಿದ ಬೆ.10-11 ಗಂಟೆಯಾಗಿರಬಹುದು, ನಿಖರವಾದ ಸಮಯ ಹೇಳಲು ಆಗುವುದಿಲ್ಲ.

3. ನಿಪಿ-3 ನ್ನು ಬಿಟ್ಟು ನಾನು ಬೇರೆ ಯಾವುದೇ ದಾಖಲೆಗೆ ಸಹಿ ಮಾಡಿಲ್ಲ. ನಿಪಿ-3 ರಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನೀವು ಖಾಲಿ ಹಾಳೆಗೆ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**